ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಅಂಕೋಲಾ

ಸಿಸಿ ನಂಬರ. 357/2015

ಸಿ ಡಬ್ಲ್ಯೂ-1

ಪಿ ಡಬ್ಲ್ಯೂ-1

ದಿಃ 29-08-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

| | |
|---|---|
| ಸಾಕ್ಷಿಯ ಹೆಸರುಃ | ಮಾಧವ್ ನಾಯಕ |
| ತಂದೆಯ ಹೆಸರುಃ | ಬಾಬು ನಾಯಕ |
| ವಯಸ್ಸುಃ | 58 ವರ್ಷ |
| ಉದ್ಯೋಗಃ | ಗುತ್ತಿಗೆದಾರ |
| ವಿಳಾಸಃ | ಪದ್ಮನಾಭನಗರ,ನಂದನಗದ್ದಾ, ಕಾರವಾರ. |

ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ರವರಿಂದಃ

(ಆರೋಪಿಯು ಗೈರು ಹಾಜರಾಗಿದ್ದು, ಆರೋಪಿ ಪರ ವಕೀಲರು ಆರೋಪಿಯ ಗುರುತಿಸುವೆಕೆಯಲ್ಲಿ ಯಾವುದೇ ತಕರಾರು ಇರುವುದಿಲ್ಲ ಎಂದು ಹೇಳಿದ್ದರಿಂದ ಸಾಕ್ಷಿದಾರರ ಸಾಕ್ಷಿಯನ್ನು ದಾಖಲಿಸಲಾಯಿತು.)

ಚಾಸಾ-4 ರವರ ಪರಿಚಯವಿರುತ್ತದೆ. ದಿಃ09-04-2014 ರಂದು ನಾನು ಒಂದು ಹೆರಾಯಿನ್ ಹಿಡಿದಂತಹ ಪ್ರಕರಣದಲ್ಲಿ ಶೀಲಾ ಲಕ್ಷ್ಮಣ ನಾಯಕ ಇವರು ಆರೋಪಿಯಾಗಿದ್ದ ಪ್ರಕರಣದಲ್ಲಿ ಪಂಚರಾಗಿದ್ದು, ಅದಕ್ಕೆ ಸಂಬಂಧಿತವಾಗಿ ಸಾಕ್ಷಿ ಹೇಳಲು

ನ್ಯಾಯಾಲಯಕ್ಕೆ ಬಂದಿದ್ದಾಗ ನ್ಯಾಯಾಲಯದ ವರಾಂಡಾದಲ್ಲಿ ಆ ಪ್ರಕರಣದ ಆರೋಪಿಯಾದ ಶೀಲಾ ಇವರ ಗಂಡನಾದ ಆರೋಪಿ ಲಕ್ಷ್ಮಣ ಚುಡಿಯಾ ನಾಯಕ ಇವರು ನನ್ನನ್ನು ನೋಡಿದ ಕೂಡಲೇ ಅವಾಚ್ಯ ಶಬ್ದಗಳಿಂದ ಬೈದು, ಬೋಳಿ ಮಗನೇ ನೀವು ಏನಾದರೂ ಪಂಚನಾಮೆಗೆ ಸಾಕ್ಷಿ ಹೇಳಲು ಹೋದರೆ ನಿನ್ನನ್ನು ಕೊಲೆ ಮಾಡಿ ಮುಗಿಸಿ ಬಿಡುತ್ತೇನೆ ಎಂದು ಬೆದರಿಕೆ ಹಾಕಿರುತ್ತಾರೆ. ನಂತರ ನಾನು ಅದೇ ದಿನ ಮಾನ್ಯ ನ್ಯಾಯಾಲಯದ ಮುಂದೆ ಮಾನ್ಯ ನ್ಯಾಯಾಧೀಶರ ಮುಂದೆ ಈ ವಿಚಾರವಾಗಿ ಲಿಖಿತವಾದ ದೂರನ್ನು ಕೊಟ್ಟಿರುತ್ತೇನೆ. ಆರೋಪಿಯು ನನಗೆ ಬೈದಾಗ ಮಧ್ಯಾಹ್ನ 1.55 ಗಂಟೆಯ ಆಗಿತ್ತು. ನಂತರ ನಾನು ಆ ಪ್ರಕರಣಕ್ಕೆ ಪಂಚನಾಮೆಗೆ ಸಂಬಂಧಪಟ್ಟು ಸಾಕ್ಷಿ ಹೇಳಿ ಹೋಗಿರುತ್ತೇನೆ.

2. ನಂತರ 3-4 ತಿಂಗಳುಗಳ ನಂತರ ಆಗಸ್ಟ್ ತಿಂಗಳಲ್ಲಿ ಈ ಪ್ರಕರಣಕ್ಕೆ ಸಂಬಂಧಪಟ್ಟು ನ್ಯಾಯಾಲಯದ ವರಾಂಡಾದಲ್ಲಿ ಪಂಚನಾಮೆಯನ್ನು ಜರುಗಿಸಲಾಯಿತು. ನಾನು ಪೊಲೀಸರಿಗೆ ಸ್ಥಳವನ್ನು ತೋರಿಸಿರುತ್ತೇನೆ. ಸಾಕ್ಷಿಯು ತಾವು ನ್ಯಾಯಾಧೀಶರ ಮುಂದೆ ಕೊಟ್ಟ ಲಿಖಿತ ದೂರಿನ ಮೇಲಿರುವ ಸಹಿಯನ್ನು ಗುರುತಿಸಿದ್ದು, ಲಿಖಿತ ದೂರನ್ನು ನಿಪಿ-1, ಸಹಿಯನ್ನು ನಿಪಿ-1 ಎ ಎಂದು ಗುರುತಿಸಲಾಯಿತು. ಸಾಕ್ಷಿಗೆ ಸ್ಥಳ ಪಂಚನಾಮೆಯನ್ನು ತೋರಿಸಲಾಗಿ ಅದರ ಮೇಲಿರುವ ತಮ್ಮ ಸಹಿಯನ್ನು ಒಪ್ಪಿಕೊಂಡಿದ್ದು, ಸ್ಥಳ ಪಂಚನಾಮೆಯನ್ನು ನಿಪಿ-2, ಸಹಿಯನ್ನು ನಿಪಿ-2 ಎ ಎಂದು ಗುರುತಿಸಲಾಯಿತು.

ಅಂದು ನನಗೆ ಅವಾಚ್ಯ ಶಬ್ದಗಳಿಂದ ಬೈದಿರುವ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ.

(ಈ ಹಂತದಲ್ಲಿ ಮಾನ್ಯ ಎ.ಪಿ.ಪಿ. ಇವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟಿ ಸವಾಲಿಗೆ ಅನುಮತಿ ಕೋರಿದ್ದು, ಅನುಮತಿಸಲಾಯಿತು.)

<u>ಪಾಟಿ ಸವಾಲುಃ</u> ಮಾನ್ಯ ಎ.ಪಿ.ಪಿ.ಯವರಿಂದ

3. ದಿಃ 22-08-2014 ರಂದು ಸ್ಥಳ ಪಂಚನಾಮೆಗೆ ಜಾಗವನ್ನು ತೋರಿಸಿರುತ್ತೇನೆ ಎಂದರೆ ಸರಿ. ಹಾಗೆ ನೀವು ಜಾಗವನ್ನು ತೋರಿಸಿದ್ದರ ಬಗ್ಗೆ, ಪಂಚನಾಮೆ ಮಾಡಿದ್ದರ ಬಗ್ಗೆ ಹಾಗೂ ನನ್ನ ಸಂಗಡ ಚಾಸಾ-4 ಮತ್ತು 6 ರವರೂ ಸಹ ಇದ್ದರು ಎಂದು ಹೇಳಿಕೆಯನ್ನು ಕೊಟ್ಟಿರುತ್ತೇನೆ ಎಂದರೆ ಸರಿ.

<u>ಪಾಟೀ ಸವಾಲುಃ</u> ಆರೋಪಿ ಪರ ವಕೀಲರಾದ ಶ್ರೀ ಎನ್ ಆರ್. ಎನ್

4. ನಿಮಗೆ ಹಾಗೂ ಆರೋಪಿಗೂ ಎಷ್ಟು ವರ್ಷಗಳಿಂದ ವೈಮನಸ್ಸು ಇರುತ್ತದೆ ಎಂದು ಹೇಳುತ್ತೀರಿ ಎಂದರೆ ಸಾಕ್ಷಿಯು ನಮ್ಮ ಮಧ್ಯ ಯಾವುದೇ ದ್ವೇಷ ಇರುವುದಿಲ್ಲ ಎಂದು ನುಡಿಯುತ್ತಾರೆ. ಆರೋಪಿಯು ನಿಮ್ಮ ವಿರುದ್ಧ ನೀವು ಕಳಪೆ ಕಾಮಗಾರಿಯನ್ನು ಮಾಡಿ, ಹಣವನ್ನು ಲಪಟಾಯಿಸುತ್ತೀರಿ ಎಂದು ಆರೋಪ ಮಾಡಿ, ಪತ್ರಿಕೆಯಲ್ಲಿ ಹೇಳಿಕೆಯನ್ನು ಕೊಟ್ಟಿದ್ದರು ಎಂದರೆ ಸರಿ. ಸಾಕ್ಷಿಯು ಸ್ವತಃ ಕೊಟ್ಟಿದ್ದ ಮಾತ್ರಕ್ಕೆ ನಾನು ದ್ವೇಷವನ್ನು

ಇಟ್ಟುಕೊಳ್ಳುತ್ತೇನೆ ಎಂದು ಅರ್ಥವಲ್ಲ ಎಂದು ನುಡಿಯುತ್ತಾರೆ. ಆರೋಪಿಯು ಈ ಘಟನೆಯ ಪೂರ್ವದಲ್ಲಿ ಆ ರೀತಿ ಹೇಳಿಕೆಯನ್ನು ಕೊಟ್ಟಿರುತ್ತಾರೆ ಎಂದರೆ ನೆನಪಿರುವುದಿಲ್ಲ. ಹಾಗೂ ಇನ್ನೂ ಹಲವು ಪ್ರಕರಣಗಳಲ್ಲಿ ನೀವು ಸರಕಾರಿ ನೌಕರರಿಗೆ ಅನಾವಶ್ಯಕವಾಗಿ ಕಿರುಕುಳವನ್ನು ಕೊಡುತ್ತೀರಿ ಎಂದು ನಿಮ್ಮ ವಿರುದ್ಧ ಸಾರ್ವಜನಿಕವಾಗಿ ಪತ್ರಿಕೆಯಲ್ಲಿ ಆರೋಪ ಮಾಡಿರುತ್ತಾರೆ ಹಾಗೂ ಇದಕ್ಕೆ ಉದಾಹರಣೆ ಡಾಃ ಸಂಧ್ಯಾ ಇವರು ಎಂದರೆ ಸಾಕ್ಷಿಯು ಆರೋಪವು ಸತ್ಯವಾಗಿದ್ದು, ಆರೋಪಿಯು ಸದರಿ ವೈದ್ಯರ ದೂರದ ಸಂಬಂಧಿಯಾಗಿದ್ದು, ಸರಕಾರವು ಅವರ ವಿರುದ್ಧ ಕ್ರಮವನ್ನು ತೆಗೆದುಕೊಂಡಿದ್ದು, ಆ ವಿಚಾರಕ್ಕೆ ಸಂಬಂಧಪಟ್ಟು ಪ್ರೆಸ್ ಮೀಟನ್ನು ಮಾಡಲಾಯಿತು. ಸುಳ್ಳು ಆರೋಪವನ್ನು ಮಾಡಲಾಯಿತು ಎಂದು ಆರೋಪಿಯು ಹೇಳಿರುತ್ತಾರೆ ಎಂದು ನುಡಿಯುತ್ತಾರೆ. ಆರೋಪಿಯು ನಿಮ್ಮ ವಿರುದ್ಧ ಆರೋಪ ಮಾಡಿದ್ದು, ಈ ಘಟನೆಯು ನಡೆಯುವ ಪೂರ್ವದಲ್ಲಿ ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿಯುತ್ತಾರೆ.

5. ನ್ಯಾಯಾಲಯದ ವರಾಂಡದಲ್ಲಿ ಪಂಚನಾಮೆಯ ಕಾಲದಲ್ಲಿ ಯಾರು ಯಾರು ಹಾಜರಿದ್ದರು ಎಂದರೆ ಸಾಕ್ಷಿಯು ಪಿ ಎಸ್ ಐ ಕುಮಾರ ಹಾರ್ಡಕರ ಮತ್ತು ಪೊಲೀಸ್ ಸಿಬ್ಬಂದಿಗಳು ಬಂದಿದ್ದರು ಎಂದು ನುಡಿಯುತ್ತಾರೆ. ನೀವು ದೂರನ್ನು ಕೊಟ್ಟ ಸಂದರ್ಭದಲ್ಲಿ ಅಂಕೋಲಾದಲ್ಲಿ ಎರಡು ನ್ಯಾಯಾಲಯಗಳು ಮಾತ್ರ ನಡೆಯುತ್ತಿದ್ದವು ಎಂದರೆ ಸರಿ. ಆ ಸಂದರ್ಭದಲ್ಲಿ ಇಬ್ಬರು ನ್ಯಾಯಾಧೀಶರು, ವಕೀಲರು, ನ್ಯಾಯಾಲಯದ ಸಿಬ್ಬಂದಿಗಳು

ಹಾಗೂ ಸಹಾಯಕ ಸರಕಾರಿ ಅಭಿಯೋಜಕರು ಮತ್ತು ಪೊಲೀಸರು ಇರುತ್ತಿದ್ದರು ಎಂದರೆ ಸರಿ. ನೀವು ಹೇಳಿದ ಪಂಚನಾಮೆಯ ಕಾಲದಲ್ಲಿ ಮೇಲೆ ಹೇಳಿದ ಎಲ್ಲರೂ ಸಹ ಇದ್ದರು ಎಂದರೆ ಸರಿ. ಪಶ್ಚಿಮ ದಿಕ್ಕಿನ ವರಾಂಡವು ನ್ಯಾಯಾಲಯದ ಸಿಬ್ಬಂದಿಗಳು ಕೆಲಸ ಮಾಡುತ್ತಿದ್ದಂತಹ ಕೊಠಡಿ ಇದ್ದು, ನ್ಯಾಯಾಲಯಕ್ಕೆ ಹೊಂದಿಕೊಂಡೇ ಇರುತ್ತದೆ ಎಂದರೆ ಸರಿ. ಅದೇ ರೀತಿ ದಕ್ಷಿಣಕ್ಕೆ ಇರುವಂತಹ ವರಾಂಡಕ್ಕೆ ಹೊಂದಿ ಸರಕಾರಿ ಅಭಿಯೋಜಕರ ಕಚೇರಿ ಹಾಗೂ ವಕೀಲ ಸಂಘದ ಕಚೇರಿ ಇತ್ತು ಎಂದರೆ ಸರಿ. ಪೂರ್ವ ದಿಕ್ಕಿಗೆ ಹಿರಿಯ ನ್ಯಾಯಾಧೀಶರ ನ್ಯಾಯಾಲಯ ಮತ್ತು ನ್ಯಾಯಾಲಯದ ಸಿಬ್ಬಂದಿಗಳು ಇದ್ದಂತಹ ಸ್ಥಳವಾಗಿತ್ತು ಎಂದರೆ ಸರಿ. ಹಾಗೂ ಉತ್ತರ ದಿಕ್ಕಿನ ವರಾಂಡಕ್ಕೆ ಹೊಂದಿಕೊಂಡು ನ್ಯಾಯಾಧೀಶರ ಕೊಠಡಿ, ನ್ಯಾಯಾಲಯ ಹಾಗೂ ಜನರು ಓಡಾಡುವಂತಹ ಪ್ಯಾಸೇಜ್ ಆಗಿತ್ತು ಎಂದರೆ ಸರಿ. ಆದ ಕಾರಣ ವರಾಂಡಾದ ಆವರಣದಲ್ಲಿ ಗಲಾಟೆಯಾದ ತಕ್ಷಣ ಅಲ್ಲಿ ಇದ್ದಂತಹ ಸಿಬ್ಬಂದಿಗಳಿಗೆ ಗೊತ್ತಾಗುತ್ತದೆ ಎಂದರೆ ಸಾಕ್ಷಿಯು ಅದು ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ನಿಮ್ಮ ಜೊತೆಗೆ ಪಂಚನಾಮೆಗೆ ಬಂದ ಪೊಲೀಸರು ನ್ಯಾಯಾಲಯದ ಸಿಬ್ಬಂದಿಗಳನ್ನು ವಿಚಾರಣೆ ಮಾಡಿರುತ್ತಾರಾ ಎಂದರೆ ಸಾಕ್ಷಿಯು ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ನಿರ್ಧಿಷ್ಟವಾದ ಯಾವ ಸ್ಥಳದಲ್ಲಿ ನೀವು ಹೇಳುವಂತಹ ಗಲಾಟೆ ನಡೆದಿರುತ್ತದೆ ಎಂದರೆ ಸಾಕ್ಷಿಯು ವರಾಂಡಾದ ಸೀಟಿನ ಮೇಲೆ ಆರೋಪಿಯು ಕುಳಿತುಕೊಂಡಿದ್ದಾಗ ಅಲ್ಲಿ ಆಗಿರುತ್ತದೆ ಎಂದು ನುಡಿಯುತ್ತಾರೆ. ನ್ಯಾಯಾಲಯದ ಪ್ರವೇಶ ದ್ವಾರದ ಎಡಬದಿಗೆ ಇದ್ದಂತಹ ಕಲ್ಲಿನ ಸೀಟಿನ ಹತ್ತಿರ ಆಗಿರುತ್ತದೆ.

ಪೊಲೀಸರಿಗೆ ನೀವೆ ಸ್ಥಳವನ್ನು ತೋರಿಸಿರುತ್ತೀರಾ ಅಥವಾ ಅವರೇ ತನಿಖೆಗೆ ತೆಗೆದುಕೊಂಡಿರುತ್ತಾರಾ ಎಂದರೆ ಸಾಕ್ಷಿಯು ನಾನೇ ತೋರಿಸಿರುತ್ತೇನೆ ಎಂದು ನುಡಿಯುತ್ತಾರೆ. ನ್ಯಾಯಾಲಯದ ಪ್ರವೇಶ ದ್ವಾರದ ನೇರವಾಗಿ ಹೋದರೆ ಒಂದು ನ್ಯಾಯಾಲಯ ಬರುತ್ತಿದ್ದು, ಬಲಬದಿಗೆ ಶಿರಸ್ತೇದಾರ ಇವರ ಕಚೇರಿ ಬರುತ್ತದೆ ಎಂದರೆ ಸರಿ. ನಿಮ್ಮ ಪ್ರಕಾರ ಆ ಪ್ರಕರಣದಲ್ಲಿ ಸಾಕ್ಷಿ ಹೇಳಲು ಬಂದಾಗ ಸರಕಾರಿ ವಕೀಲರನ್ನು ಭೇಟಿಯಾಗಿರುತ್ತೀರಿ ಎಂದರೆ ಸರಿ. ಆ ದಿನ ನೀವು ಹೇಳಿದ ಗಲಾಟೆಯಾಯಿತು ಎನ್ನುವ ವಿಚಾರವನ್ನು ಸರಕಾರಿ ವಕೀಲರಿಗೆ ಏನಾದರು ತಿಳಿಸಿರುತ್ತೀರಾ ಎಂದರೆ ಸಾಕ್ಷಿಯು ಗಲಾಟೆಯಾದ ನಂತರ ನನಗೆ ಹಾಗೂ ಸರಕಾರಿ ವಕೀಲರಿಗೆ ಯಾವುದೇ ಮಾತುಕತೆಯಾಗಿರುವುದಿಲ್ಲ ಎಂದು ನುಡಿಯುತ್ತಾರೆ. ಅದೇ ರೀತಿ ನ್ಯಾಯಾಲಯದಲ್ಲಿ ಇದ್ದಂತಹ ಶಿರಸ್ತೇದಾರರು, ನ್ಯಾಯಾಲಯದ ಸಿಬ್ಬಂದಿಗಳಿಗೆ ಅಥವಾ ಪೊಲೀಸರಿಗೆ ವಿಷಯವನ್ನು ತಿಳಿಸಿದ್ದೀರಾ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ನೀವು ಹೇಳುವಂತಹ ಘಟನೆಯು ಏನಾದರೂ ನಡೆದಿದ್ದರೆ, ಸದರಿ ವಿಚಾರವನ್ನು ಶಿರಸ್ತೇದಾರರಿಗೆ, ಸಿಬ್ಬಂದಿಗಳಿಗೆ ಹಾಗೂ ನ್ಯಾಯಾಲಯದ ಪೊಲೀಸರು ಹೇಳಲು ಯಾವುದೇ ತೊಂದರೆ ಇರುತ್ತಿರಲ್ಲಿ ಎಂದರೆ ಸಾಕ್ಷಿಯು ಎಲ್ಲರೂ ಸಹ ಆ ಸಮಯದಲ್ಲಿ ಮೂಕ ಪ್ರೇಕ್ಷರಾಗಿ ನಿಂತಿದ್ದು, ಆದ ಕಾರಣ ನಾನು ನೇರವಾಗಿ ನ್ಯಾಯಾಧೀಶರ ಮುಂದೆ ಲಿಖಿತವಾದ ದೂರನ್ನು ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ಈ ರೀತಿ ದೂರಿನಲ್ಲಿ

ಬರೆಸಿರುತ್ತೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಅದನ್ನು ನಾನು ಸೃಷ್ಟಿಸಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

6. ನ್ಯಾಯಾಲಯದ ಊಟದ ಅವಧಿ 2 ರಿಂದ 2.30 ತನಕ ಆಗುತ್ತಿತ್ತು ಎಂದರೆ ಸರಿ. ತಾವು ಆ ದಿನ ಮಧ್ಯಾಹ್ನ ಊಟ ಎಲ್ಲಿ ಮಾಡಿರುತ್ತೀರಿ ಎಂದರೆ ಸಾಕ್ಷಿಯು ನಾನು ಊಟಕ್ಕೆ ಹೋಗಿರುವುದಿಲ್ಲ, ಮನಸ್ಸು ಸರಿ ಇಲ್ಲದ ಕಾರಣ ಇಲ್ಲೆ ಇದ್ದೆ ಎಂದು ನುಡಿಯುತ್ತಾರೆ. ಅಂದರೆ ನೀವು ಒಬ್ಬರೇ ಹೊರಗಡೆ ಹೋಗದೆ ಕುಳಿತುಕೊಂಡಿರುತ್ತೀರಾ ಎಂದರೆ ಸರಿ. ನೀವು A−4 ಸೈಜ್ ಪೇಪರನ್ನು ನಿಮ್ಮ ಹತ್ತಿರ ಇಟ್ಟುಕೊಂಡೇ ಹೋಗುತ್ತೀರಾ ಎಂದರೆ ಸಾಕ್ಷಿಯು ಇಲ್ಲ ನಾನು ಶಿರಸ್ತೇದಾರ ಇವರಿಂದ ಪಡೆದುಕೊಂಡಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ವಿಚಾರವನ್ನು ಪೊಲೀಸರಿಗೆ ಏನಾದರೂ ಹೇಳಿರುತ್ತೀರಾ ಎಂದರೆ ಸಾಕ್ಷಿಯು ಅದನ್ನು ಕೇಳಿರುವುದಿಲ್ಲ ಎಂದು ನುಡಿಯುತ್ತಾರೆ.

7. ನಿಮ್ಮ ಹತ್ತಿರ ಮೊಬೈಲ್ ಹಾಗೂ ವಾಹನ ಇರುತ್ತವೆ ಎಂದರೆ ಸರಿ. ಅಂಕೋಲಾ ಪೋಲೀಸ್ ಠಾಣೆಯ ಸಿಬ್ಬಂದಿಯವರ ಜೊತೆಗೆ ಸಾಕಷ್ಟು ಸಂಪರ್ಕ ಇರುತ್ತದೆ ಎಂದರೆ ಸರಿ. ಊಟದ ಅವಧಿಯಲ್ಲಿ ಪೊಲೀಸರಿಗೆ ಪೋನ್ ಮುಖಾಂತರ ದೂರನ್ನು ಸಲ್ಲಿಸಲು ಏನಾದರೂ ತೊಂದರೆ ಇತ್ತಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಘಟನೆಯಾದ ತಕ್ಷಣ ನ್ಯಾಯಾಧೀಶರ ಮುಂದೆ ದೂರನ್ನು ಕೊಡಲು ಏನಾದರೂ ತೊಂದರೆ ಇತ್ತಾ ಎಂದರೆ ನ್ಯಾಯಾಲಯ ನಡೆಯುತ್ತಿರುವಾಗ ಆ ರೀತಿ ಕೊಡಲು ಆಗುವುದಿಲ್ಲ ಎಂದು

ನುಡಿಯುತ್ತಾರೆ. ನಿಮ್ಮ ಪ್ರಕಾರ ನೀವು ಎಷ್ಟು ನಿಮಿಷದಲ್ಲಿ ದೂರನ್ನು ಬರೆದಿಟ್ಟುಕೊಂಡಿರುತ್ತೀರಾ ಎಂದರೆ ಸಾಕ್ಷಿಯು ಊಟದ ಅವಧಿಯಲ್ಲಿ ತಯಾರು ಮಾಡಿಕೊಂಡು ಇಟ್ಟುಕೊಂಡಿರುತ್ತೇನೆ ಎಂದು ನುಡಿಯುತ್ತಾರೆ. ಮಧ್ಯಾಹ್ನ 3 ಗಂಟೆಯ ಅವಧಿಗೆ ನ್ಯಾಯಾಲಯ ಪ್ರಾರಂಭವಾದಾಗ ತಕ್ಷಣವೇ ದೂರನ್ನು ಕೊಡಲು ಏನಾದರೂ ತೊಂದರೆ ಇತ್ತಾ ಎಂದರೆ ಸಾಕ್ಷಿಯು ನ್ಯಾಯಾಲಯ ಪ್ರಾರಂಭವಾದ ತಕ್ಕಣವೇ ದೂರನ್ನು ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ನೀವು ಆರೋಪಿ ಹೆಂಡತಿಯ ವಿರುದ್ಧ ಸಾಕ್ಷಿಯನ್ನು ಹೇಳಲು ಬಂದಿರುವ ಪ್ರಕರಣದಲ್ಲಿ ಅದು ಹೆರಾಯಿನ್ ಆಗಿರುವುದಿಲ್ಲ ಬದಲಾಗಿ ಸುಣ್ಣದ ಪೌಡರ್ ಆಗಿರುತ್ತದೆ ಎಂದು ಸಾಬೀತು ಆಗಿ ಅವರು ಬಿಡುಗಡೆ ಹೊಂದಿರುತ್ತಾರೆ ಎಂದರೆ ಸಾಕ್ಷಿಯು ಅದರ ಬಗ್ಗೆ ನಮಗೆ ಮಾಹಿತಿ ಇರುವುದಿಲ್ಲ ಎಂದು ನುಡಿಯುತ್ತಾರೆ. ನೀವು ಹಾಗೂ ಪೊಲೀಸರು ಆದಂತಹ ಚಲವಾದಿಯವರು ಸೇರಿಕೊಂಡು ಒಂದು ಸುಳ್ಳು ಪ್ರಕರಣವನ್ನು ಮಾಡಿರುತ್ತೇವೆ ಎಂದು ಆರೋಪಿಯು ಹೇಳುತ್ತಾರೆ ಎಂದರೆ ಸರಿಯಲ್ಲ. ಆ ಪ್ರಕರಣವು ಹಟ್ಟಿಕೇರಿಯಲ್ಲಿ ಆಗಿದ್ದರೂ ಸಹ ಚಲವಾದಿಯವರು ನಿಮ್ಮನ್ನು ಕಾರವಾರದಿಂದ ಪಂಚನಾಮೆಗೆ ಎಂದು ಪಂಚರಾಗಿ ಕರೆಸಿಕೊಂಡಿರುತ್ತಾರೆ ಎಂದರೆ ಸರಿ. ನೀವಿಬ್ಬರೂ ಸೇರಿ ಆರೋಪಿ ಹೆಂಡತಿಯ ವಿರುದ್ಧ ಸುಳ್ಳು ಪ್ರಕರಣವನ್ನು ದಾಖಲಿಸಿದ್ದ ಕಾರಣ ಸ್ಥಳಿಯರನ್ನು ಪಂಚರನ್ನಾಗಿ ಮಾಡದೇ ನಿಮ್ಮನ್ನು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಪೊಲೀಸರು ಈ ಪ್ರಕರಣದಲ್ಲಿ ನಿಮ್ಮನ್ನು ಪಂಚನಾಮೆಗೆ ಬರುಬೇಕು ಎಂದು ಯಾವಾಗ ಕರೆದಿರುತ್ತಾರೆ ಎಂದರೆ ಸಾಕ್ಷಿಯು 4

ತಿಂಗಳುಗಳ ನಂತರ ಕರೆದಿದ್ದು, ದಿನಾಂಕ ಸರಿಯಾಗಿ ನೆನಪಿರುವುದಿಲ್ಲ ಎಂದು ನುಡಿಯುತ್ತಾರೆ. ನಿಮ್ಮ ಪ್ರಕಾರ ಪಂಚನಾಮೆಗೆ ಎಷ್ಟು ಜನರು ಸಹಿ ಮಾಡಿರುತ್ತಾರೆ ಎಂದರೆ 2-3 ಜನರು ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ನಿಮ್ಮ ಪ್ರಕಾರ 2-3 ಜನರು ನ್ಯಾಯಾಲಯದಲ್ಲಿಯೇ ಇದ್ದರಾ ಅಥವಾ ಅವರೇ ಕರೆದುಕೊಂಡು ಬಂದಿದ್ದರಾ ಎಂದರೆ ನನಗೆ ಮಾಹಿತಿ ಇರುವುದಿಲ್ಲ.

8. ಚಾಸಾ-2 ಮತ್ತು 3 ರವರು ನಿಮಗೆ ತುಂಬಾ ಆತ್ಮೀಯರು ಎಂದರೆ ಸಾಕ್ಷಿಯು ಆತ್ಮೀಯರು ಆಗಿರುವುದಿಲ್ಲ, ಪರಿಚಯಸ್ಥರು ಎಂದು ನುಡಿಯುತ್ತಾರೆ. ಇವರಿಬ್ಬರುನಿಮ್ಮ ಜೊತೆಗೆ ಯಾವಾಗಲೂ ಸಹ ಹೊರಾಟಕ್ಕೆ ಬಂದು, ನಿಮ್ಮ ಹುಟ್ಟು ಹಬ್ಬಕ್ಕೆ ಮೊಟ್ಟ ಮೊದಲು ಇವರಿಬ್ಬರೇ ಶುಭ ಹಾರೈಕೆಯನ್ನು ಮಾಡುತ್ತಿದ್ದು, ಅಷ್ಟು ಆತ್ಮೀಯರು ಆಗಿರುತ್ತಾರೆ ಎಂದರೆ ಸಾಕ್ಷಿಯು ಪರಿಚಯಸ್ಥರು ಎಂದು ನುಡಿಯುತ್ತಾರೆ. ಅವರಿಬ್ಬರು ನಿಮ್ಮ ಹುಟ್ಟುಹಬ್ಬದ ಅಂಗವಾಗಿ ಪತ್ರಿಕೆಯಲ್ಲಿ ದೊಡ್ಡದಾಗಿ ಶುಭ ಹಾರೈಕೆಯನ್ನು ಪ್ರಕಟಿಸಿದ್ದು, ಅಷ್ಟು ಆತ್ಮೀಯತೆಯಿಂದ ನೀವು ಇರುತ್ತೀರಿ ಎಂದರೆ ಸರಿಯಲ್ಲ. ಹೀಗಾಗಿ ಇವರಿಬ್ಬರು ನೀವು ಹೇಳಿದಾಗ ಬರುವಾಗ ಹಾಗೂ ನೀವು ಹೇಳುವ ಕಡೆ ಸಹಿ ಮಾಡುವಂತಹ ವ್ಯಕ್ತಿಗಳು ಎಂದರೆ ಸರಿಯಲ್ಲ. ಚಾಸಾ-2 ರವರ ವಿರುದ್ಧ ಅಪಹರಣದ ಪ್ರಕರಣ ಆಗಿತ್ತು ಎಂದರೆ ಸರಿ. ಆ ಸಮಯದಲ್ಲಿ ನೀವು ಚಾಸಾ-2 ರವರ ಜೊತೆಗೆ ನಿಂತಿರುತ್ತೇನೆ ಎಂದರೆ ಸರಿ. ಸಾಕ್ಷಿಯು ಸ್ವತಃ ಸತ್ಯದ ಪರವಾಗಿ ನಿಂತಿರುತ್ತೇನೆ ಎಂದು ನುಡಿಯುತ್ತಾರೆ. ಈ ಪ್ರಕರಣದಲ್ಲಿ

ಸಾಕ್ಷಿದಾರರು ಎಂದು ಯಾರನ್ನು ತೋರಿಸಿರುತ್ತಾರೆ ಎಂದು ಗೊತ್ತಾ ಎಂದರೆ ಗೊತ್ತಿರುವುದಿಲ್ಲ. ಚಾಸಾ-5 ರವರು ನಿಮ್ಮ ಜೊತೆಗೆ ಇರುವ ಪತ್ರಿಕಾ ವರದಿಗಾರರು ಆಗಿದ್ದು, ಕಾರವಾರದವರು ಆಗಿದ್ದರು ಎಂದರೆ ಸರಿ. ಅದೇ ರೀತಿ ಚಾಸಾ-4 ರವರು ಸಹ ನಿಮ್ಮೊಂದಿಗೆ ಇರುವಂತಹ ತೆಲಂಗ ರೋಡ್, ಕಾರವಾರರವರು ಎಂದರೆ ಸರಿ. ನೀವು ಎಲ್ಲರೂ ಸೇರಿಕೊಂಡು ಪತ್ರಿಕಾ ವರದಿ ಸಂದರ್ಭದಲ್ಲಿ ಟೀಂ ಹೊರತಾಗಿ ಕೆಲಸ ಮಾಡುತ್ತೀರಿ ಎಂದರೆ ಸರಿಯಲ್ಲ. ಅದೇ ರೀತಿ ಅವರೆಲ್ಲರೂ ಸಹ ನಿಮ್ಮ ಜೊತೆಗೆ ಸಮಾಜ ಸೇವಕರಾಗಿ ಕೆಲಸ ಮಾಡುತ್ತಾರೆ ಎಂದರೆ ಸರಿ. ಈ ಪ್ರಕರಣದ ಎಲ್ಲ ಸಾಕ್ಷಿದಾರರ ಮೇಲೆ ಯಾವುದೇ ಪ್ರಕರಣ ಇರುವುದಿಲ್ಲ ಎಂದರೆ ನನಗೆ ಗೊತ್ತಿರುವುದಿಲ್ಲ.

ಪಾಟೀ ಸವಾಲನ್ನು ವಿನಂತಿ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ).

ಓ ಹೇ ಕೇ ಸರಿ ಇದೆ

ಹೆಚ್ಚುವರಿ ಜೆ.ಎಂ.ಎಫ್.ಸಿ., ಅಂಕೋಲಾ.